ಆ) ಇದರಲ್ಲಿ 6 ಎಕರೆ ಜಮೀನು ಸರ್ಕಾರದ ಸ್ವಾಧೀನದಲ್ಲಿದ್ದು, ಇನ್ನುಳಿದ 22 ಗುಂಟೆ ಜಮೀನನ್ನು ಖಾಸಗಿಯವರು ಅತಿಕ್ರಮಿಸಿರುತ್ತಾರೆ

ಇ) ಅತಿಕ್ರಮಣದಾರರು ಅಫಜಲಪೂರ ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಿರುವುದರಿಂದ, ಒತ್ತುವರಿಯಾಗಿರುವ ಜಮೀನು ತೆರವುಗೊಳಿಸುವ ಪ್ರಕರಣ ನ್ಯಾಯಾಲಯದಲ್ಲಿದೆ

784 (1003) ಶ್ರೀ ಪಾಟೀಲ್ ಎಂ ವೈ (ಅಫ್ಜಲಪುರ) ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಫಜಲಪೂರ ಮತಕ್ಷೇತ್ರದಲ್ಲಿ ಕೆರೆಗಳ ಸಂಖ್ಯೆಗಳೆಷ್ಟು ಹಾಗೂ ಆ ಕೆರೆಗಳ ಮುಖಾಂತರ ಎಷ್ಟು ಎಕರೆ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ ,

ಆ) ಆ ಕ್ಷೇತ್ರದ ಕೆರೆಗಳು ತುಂಬದೇ ಇದ್ದ ವಕ್ಷದಲ್ಲಿ ಹತ್ತಿರದಲ್ಲಿ ಹರಿಯುತ್ತಿರುವ ಭೀಮಾ ನದಿಯಿಂದ ಈ ಕೆರೆಗಳಿಗೆ ನೀರು ತುಂಬಿಸುವ ಕೆಲಸವನ್ನು ಸರ್ಕಾರ ಕೈಗೆತ್ತಿಕೊಳ್ಳುವುದೇ ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಅಫಜಲಪೂರ ಮತಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಡಿ 8 ಕೆರೆಗಳು ಅಸ್ತಿತ್ವದಲ್ಲಿರುತ್ತವೆ 2000–2001ನೇ ಸಾಲಿನಲ್ಲಿ ಈ ಕೆರೆಗಳಿಂದ 254 30 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಿದ್ದು, ನಂತರದ ವರ್ಷಗಳಲ್ಲಿ ಮಳೆ ಬಾರದೆ ಈ ಕೆರೆಗಳು ತುಂಬದೇ ಇದ್ದ ಕಾರಣ, ಯಾವುದೇ ನೀರಾವರಿ ಸೌಲಭ್ಯ ಕಲ್ಪಿಸಲು ಸಾಧ್ಯವಾಗಿಲ್ಲ

ಆ) ತಾಂತ್ರಿಕ ಶಕ್ಯತೆ ಹಾಗೂ ಅನುದಾನದ ಲಭ್ಯತೆಯ ಆಧಾರದ ಮೇಲೆ ಪರಿಶೀಲಿಸಲಾಗುವುದು

785 (349) ಶ್ರೀ ಎಸ್ ಎಸ್ ಪಾಟೀಲ್ (ಮುಂಡರಗಿ) ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಂಡರಗಿ ತಾಲೂಕು ಡಂಬಳ ನೀರಾವರಿ ಕೆರೆಯ ನೂತನ ಬಲದಂಡೆ ಕಾಲುವೆಯ ಕೆಲಸ ಪ್ರಾರಂಭವಾದ ದಿನಾಂಕ ತಿಳಿಸುವುದು ,

ಆ) ಪ್ರಾರಂಭದಲ್ಲಿ ಈ ಕಾಲುವೆಯ ಅಂದಾಜು ಮೊತ್ತ ಎಷ್ಟಿತ್ತು , ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು ,

ಇ) ಈ ಕಾಲುವೆಯ ಕಾಮಗಾರಿ ಮುಗಿದು ರೈತರಿಗೆ ನೀರಾವರಿ ಮಾಡಲು ಎಷ್ಟು ವರ್ಷ ಬೇಕಾಗುತ್ತದೆ ?